ಶ್ರೀವಾದಿರಾಜಾಂತರ್ಗತ ಮಧ್ವೇಶಾಭಿನ್ನಶ್ರೀಕೃಷ್ಣಾಯನಮಃ
ಶ್ರೀವಾದಿರಾಜಗುರುಸಾರ್ವಭೌಮರು ರಚಿಸಿದ ಚತುರ್ದಶಲೋಕದೊಡೆಯ ಉಡುಪಿ
ಕೃಷ್ಣನ ಚತುರ್ದಶಪೂಜೆಗಳ ಸ್ತೋತ್ರ

ಉತ್ಸವದಾಹ್ನೀಕವಾ ಕಡು ಜನರು ಕೇಳಿರಯ್ಯ
॥ಉತ್ಸವದಾಹ್ನೀಕವಾ ॥
ಅರುಣೋದಯದೊಳೆದ್ದು ಆ ದ್ವಾರಪಾಲಕರು।
ಭರದಿ ಘಂಟೆ ಸುವಿಘ್ನ ನಾಶ ಮಾಡೆ।
ತರ ತರಹ ಹರಿದಾಸರು ತಾಳಮೇಳಗಳಿಂದ ಪರಿಪರಿಯ ಗಾನ
ಪಾಡೆ ತ್ವರಿತವಾದ್ಯಗಳಿಂದ ॥
ತರುವಾಯ ಭೋರಿಡೆ ಮುರಹರನುಪ್ಪವಡಿಸೆ।
ತರುಣ ಯತಿಗಳೆದ್ದು ಸ್ನಾನ ಜಪಗಳ ಮಾಡಿ।
ನಿರುತ ಶಂಖ ಭ್ರಮಣ ಮಾಡೆ ನೀಟಾಗಿ।
ಒಪ್ಪುತಿಹ ಉಡುಪಿಯ ಶ್ರೀಕೃಷ್ಣನ ॥ 1 ॥
॥ಉತ್ಸವದಾಹ್ನೀಕವಾ ॥

ಚಂದವುಳ್ಳ ನಿರ್ಮಾಲ್ಯ ಚಾತುರ್ಯದಿ ವಿಸರ್ಜಿಸಿ ಆ-
ನಂದಸುತಗಭಿಷೇಕವ।
ಚಂದದಿಂದಲಿ ಮಾಡಿ ಆ ರಮ್ಯ ಬಾಲ ಉಡಿಗೆ ಶ್ರೀ-
ಗಂಧ ತುಳಸಿಮಾಲೆಯರ್ಪಿಸಿ।
ಇಂದಿರೇಶಗೆ ಇಂಬಾದ ಹರಿವಾಣದಿ।
ಇಂದು ಘೃತ ನೆನೆಗಡಲೆಯು।
ಶುದ್ಧಾದ ಪಾಲ್ಮೊಸರು ಶುಂಠಿಸಕ್ಕರೆ ಲಡ್ಡಿಗೆ।
ತಂದ ನೈವೇದ್ಯವ ಸವಿದು ತಾ ಪೂಜೆ ಮಾಡಿಸಿಕೊಂಬ ॥ 2 ॥
॥ಉತ್ಸವದಾಹ್ನೀಕವಾ ॥

ಪದುಮನಾಭಗೆ ಬೇಗ ಪುರುಷಸೂಕ್ತದಭಿಷೇಕ
ಮುದದಿಂದ ಮಾಡಿದ ಬಳಿಕ।
ವಿಧಿಯಪೂರ್ವಕವಾಗಿ ಅಗಲುಗಂಧ ತುಳಸಿಮಾಲೆ।
ಅಧಿಕವಾಗಿ ಸಮರ್ಪಿಸಿ ಒದಗಿದ್ದ ಶುಂಠಿ, ಬೆಲ್ಲ ಒಳಿತಾದ ಅನ್ನ ಸೂಪ।
ದಧಿ ಕ್ಷೀರ ಕದಲೀಫಲವು ಮುರಮರ್ದನನು।
ಚೆಲುವ ತಾ ಹಂಸಪೂಜೆಯಗೊಂಬ ತದನಂತ-

from www.vijayadasaru.net

ರದಲಿ ಮೃತ್ತಿಗೆ ತಾಗಣೆಯ ಕಟ್ಟಿಸಿಕೊಂಬ ॥ 3 ॥
॥ಉತ್ಸವದಾಹ್ನಿಕವಾ ॥

ಗುರುರಾಯ ಪುರಾಣವನು ಗುಪಿತಾರ್ಥದಲಿ ಕೇಳಿ ।
ಹರಿಯಮಂದಿರಕೆ ಪೋಗಿ ತರುವಾಯ ಘೃತ-
ಕ್ಷೀರ ತಂದು ದಧಿ ದಿವ್ಯಮಧು ಸಕ್ಕರೆ ಸೀಯಾಳವು ಇಂ-
ದಿರೇಶಗೆ ಶಿರದ ಮೇಲೆ ಅಭಿಷೇಕಮುದದಿಂದ ಮಾಡಿದ ಬಳಿಕ ।
ತಿರುಗಿ ನೈವೇದ್ಯವನು ತೀವ್ರದಿಂದಲಿ ಸ-
ಮರ್ಪಿಸಿ ಚೆಲುವ ಮಂಗಳಾರತಿಯಿಂದ ಪಂಚಾಮೃತದ
ಪೂಜೆಗೊಂಬ ॥ 4 ॥ ಉತ್ಸವದಾಹ್ನಿಕವಾ ॥

ಜಲಜನಾಭಗೆ ಉಷ್ಣಜಲವ ತಂದ್ವದವ ಮಾಡಿ ।
ಲಲಿತವಾಗಿ ಎರೆಯುತ ।
ಒಳಿತಾದ ಹೆಸರ್ಹಿಟ್ಟಿನಲಿ ಒರೆಸಿ ಮಯ್ಯನೆ ।
ತೊಳೆದು ಸುಲಭಗೆ ಪಾಲುಣಿಸಿದ ಬಳಿಕ ।
ಬಾಲ ಉಡುಗೆಯುಟ್ಟು ಬಹು ನೈವೇದ್ಯವನರ್ಪಿಸಿ ।
ಚೆಲುವ ಉದ್ವಾರ್ಚನೆ ಪೂಜೆ ಚೆಂದಾಗಿ ಮಾಡಿಸಿಕೊಂಬ ॥ 5 ॥ ಉತ್ಸವಾದಾಹ್ನಿಕವಾ ॥

ಮಧ್ವಸರೋವರ ಜಲವು ಹೊಳೆವ ಚಿನ್ನ ಕಲಶದಲಿ ।
ಶೋಧಿಸಿ ತುಂಬಿಸಿ ।
ಬದ್ಧಘಂಟೆ ನಾದದಲಿ ಬಹು ಬೇಗದಲಿ ಬಂದು ಸನ್ನಿಧಿಯಲಿ ಪೂಜಿಸಿ ।
ವಿಧುರಥನೆ ಶಂಕರಥನೆ ಪುರುಸೂಕ್ತದಭಿಷೇಕ ಮುದದಿಂದ ಮಾಡಿದ ಬಳಿಕ ಸಜ್ಜೀಕೃತ ।
ದೋಸೆ ಬೆಣ್ಣೆ ಸಾರು ನೈವೇದ್ಯವ ಸವಿದು ಚೆಲುವ ।
ಮಂಗಳಾರತಿಯಿಂದ ಮುದದಿ ತೀರ್ಥಪೂಜೆಗೊಂಬ ॥ 6 ॥ ಉತ್ಸವಾದಾಹ್ನಿಕವಾ ॥

ಉರುಪದಕಾಭರಣಗಳು ಉನ್ನತತೋಳ್ಬಂದಿ ।
ಕರಮುದ್ರೆ ಕಂಕಣಗಳು ।
ಚರಣಾರವಿಂದಗಳಿಗೆ ಚಾರುಚಿನ್ನದ್ಹಾವಿಗೆ ಕಿರುಗೆಜ್ಜೆ ಕಾಲಲಂದುಗೆ ।
ವರಪೀತಾಂಬರ ಕಟಿಗೆ ವಡ್ಯಾಣ ನೇವಳ ಇಟ್ಟು ।
ನಿರುತ ಸುವರ್ಣದ ಕವಚವು ।
ಕೊರಳ ಕೌಸ್ತುಭಹಾರ ಕೋಮಲಸುವರ್ಣಕುಂಡಲ ।
ಸಿರಿಮೂಗುತಿ ಸಣ್ಣನಾಮ ಶಿರದ ಜಾವಳ ಜಡೆ ಕಡೆಗೋಲು ನೇಣು ಸಹಿತ ॥ 7 ॥ ಉತ್ಸವಾದಾಹ್ನಿಕವಾ ॥

from www.vijayadasaru.net

ಕರದಲಿ ಪಿಡಿದಿಪ್ಪಗೆ ವಡೆಸುಕ್ಕಿನುಂಡೆ ಹಪ್ಪಳ ।
ಒಡೆಯಗೋದನ ನೈವೇದ್ಯ ।
ಒಳಿತಾದ ಅನ್ನ ಸೂಪ ತಡೆಯದಾಲಂಕಾರ ಪೂಜೆ ತಾ ಗೊಂಡು ।
ತೀವ್ರಪೂಜೆ ಸಡಗರದಿಂದ ಮಾಡಿ ಸಂಭ್ರಮದಲೊಪ್ಪುವ ।
ಪರಿಮಳದ ಗಂಧ ತುಳಸಿ ಪರಮಾತ್ಮಗರ್ಪಿಸಿ ।
ಉರದಿ ಧೂಪದೀಪವೆತ್ತಿ ।
ತರತರದ ಪಚ್ಚಡಿಗಳ ತಳಿಲು ಸೀಕರಣೆಯು ।
ಕರದ ತುಪ್ಪದ ಅಪೂಪವು ಚಿತ್ರಾನ್ನ ದಧ್ಯನ್ನ ಪಂಚಕಜ್ಜಾಯ ।
ಕಲಸುಓಗರ ಬಿಡದೆ ಪರಮಾನ್ನಗಳನ್ನು ಸೊಗಸುಳ್ಳ ।
ಕ್ಷೀರದಧಿ ಶುಂಠಿ ನಿಂಬೆರಸ ತಕ್ರ ।
ಜಗದೇಕ ಸವಿದ ಪರಿಯ ॥ 8 ॥ ಉತ್ಸವಾದಾಹ್ನೀಕವಾ ॥

ಬಗೆ ಬಗೆಯ ಮಂಗಳಾರತಿ ಬಾರಿಬಾರಿಗೆ ಮಾಡಿ ಚಾ-
ಮರ ದರ್ಪಣಗಳೆಸೆ ನಗೆಮುಗದ ಕೃಷ್ಣ-
ನಂಘ್ರಿಗೆ ಷೋಡಶಪೂಜೆಯ ಮಾಡಿ ।
ಮುಗಿಸಿ ತರುವಾಯ ಗುರುರಾಯ ಬರಲು ।
ಹನುಮಂತ ದೇವರಿಗೆ ಹಸನಾದ ಭಕ್ಷ್ಯಭೋಜ್ಯ
ಅನುದಿನದಲರ್ಪಿಸಿ ।
ಪೂಜಿಸಿ ಮುನಿಮಧ್ವರಾಯರಿಗೆ ಮುದದಿಂದ ಅರ್ಪಿಸಿ ॥ 9 ॥ ಉತ್ಸವಾದಾಹ್ನೀಕವಾ ॥

ಘನಸಿಂಹಾಸನಕೆ ಹೋಗಿ ಅಣಿಯಾದ ಫಲ ನೈವೇದ್ಯ ।
ಆ ವ್ಯಾಸಗರ್ಪಿಸಿ ಒಂದನೆ ಮಂಗಳಾರತಿ ಎತ್ತಿ ।
ಜನಕೆ ತೀರ್ಥಪ್ರಸಾದ ಜಾಗ್ರತೆಯಿಂದಲಿ ಮಾಡಿ ।
ಭೋಜನವಮಾಡಿಸಿ ಈರೇಳು ಜಗಕೆ ಕೀರ್ತಿಯೊಳೆಸವ ಆ
ಭಾಗವತರು ತಾವು ಆ ಬೆಳ್ಳಿಕೋಲುಗಳನೆ
ಬೇಗದಲಿ ಪಿಡಿದು ನಿಂತು ।
ಆರು ಹೆಡೆಗೆಯ ಅರಳೂ ಆರಚ್ಚು ಬೆಲ್ಲವು ।
ಆ ಕಾಲದಲರ್ಪಿಸಿ ಪೂಜಿಸಿ ಕರಣದಲಿ ನೋಡಿ ನಗುವ ॥ 10 ॥ ಉತ್ಸವಾದಾಹ್ನೀಕವಾ ॥

ಪುಟ್ಟ ಕೃಷ್ಣರಾಯರಿಗೆ ಹೊನ್ನ ಕವಚವ ತೊಡಿಸಿ ಇಟ್ಟ ರನ್ನದ ಕಿರೀಟವು ।
ದಿಟ್ಟಾದ ಪದಕಂಗಳು ದಿವ್ಯ ಮುತ್ತಿನ ಸರ ।

from www.vijayadasaru.net

ಕಟ್ಟಿದ್ದ ಪೂಮಾಲೆ ಎಸೆಯೆ ।
ಶ್ರೇಷ್ಠವಾದ ಧೂಪದೀಪ ಶ್ರೀಪತಿಗೆ ದೋಸೆ ಬೆಣ್ಣೆ।
ಗಟ್ಟುರುಳಿ ನೈವೇದ್ಯವು ಕಟಕಟನೆ।
ಶುಂಠಿ ಕಷಾಯುಂಡು ಬಾಯಿತೊಳೆದು ।
ತಟ್ಟನೆ ರಾತ್ರಿ ಪೂಜೆಯಗೊಂಡು ತಾ ಪಲ್ಲಕ್ಕಿ ಏರಿ ಬರುವ ॥ 11 ॥ ಉತ್ಸವಾದಾಹ್ನಿಕವಾ ॥

ಓಲಗದ ಮಂಟಪಕೆ ವೈಭೋಗದಲಿ ಬಂಧು ಉ-
ಯ್ಯಾಲೆಯಲಿ ಮುದದಿ ಕುಳಿತು ।
ಬಹಳ ಪಾನಕ ಅರಳು ಬಹುಕೊಬರಿ ಚೂರುಗಳ ।
ಆ ಕಾಲದಲಿ ಸೂಸಿ ಪೂಜಿಸಿ ಕರಣದಲಿ ನೋಡಿ ನಗುವ ॥ 12 ॥ ಉತ್ಸವಾದಾಹ್ನಿಕವಾ ॥
ಧೀರನಿಗೆ ಚತುರ್ವೇದ ದಿವ್ಯಶಾಸ್ತ್ರ।
ಪುರಾಣ ಚೆಲುವಗಷ್ಟಕ ಗೀತವು ।
ಭೇರಿ ಮೌಳಿವಾದ್ಯ ಮೌಳಿ ಚಕ್ರವಾದ್ಯ ।
ತಾಳೆ ತಮಟೆ ಸರ್ವವಾದ್ಯಗಳೆಸೆಯೆ ।
ತಾರಿ ಸೇವೆಯ ಮಾಡಿ ಸ್ವಾಮಿ ವೀಳ್ಯಮಂತ್ರಾಕ್ಷತೆ ಕಾರುಣ್ಯದಲಿ ।
ಮಾರಜನಕಗೆ ಏಕಾಂತ ಸೇವೆಯ ಮಾಡಿ ನವ-
ಮಾರಜನಕನ ಹಂಸಪೂಜೆಯ ಜಾಗ್ರತೆಯಲಿ ನೋಡಿ
ನಗುವ ॥ 13 ॥ ಉತ್ಸವಾದಾಹ್ನಿಕವಾ ॥

ಹಡಗಿನಿಂದಲಿ ಬಂದು ಕಡಲತಡಿಯಲಿ ನಿಂದು ।
ಬಿಡದೆ ಯತಿಗಳ ಕಯ್ಯ ಬಿಂಕದಿ ಪೂಜೆಗೊಂಬ ।
ಆದಿ ಕೃಷ್ಣನ ಆಹ್ನಿಕವ ಆದರದಲಿ ।
ಓದಿ ವಿನೋದದಲಿ ಪಠಿಪ ಜನರಿಗೆ ।
ಆಧಿವ್ಯಾಧಿಗಳಟ್ಟಿ ಬಹುಭಾಗ್ಯಗಳ ಕೊಡುವ ।
ಮಾಧವನ ಕೃಪೆಯಿಂದಲಿ ।
ವಾದಿರಾಜರಿಗೊಲಿದು ವಚನ ಶುದ್ಧೋಕ್ತದಲಿ ।
ಹೇಳುವ ಜನರಿಗೆ ।
ಬರುವ ದುರಿತಗಳ ಕಳೆದು ಮೇಲಾಗಿ ರಕ್ಷಿಸಿಕೊಂಬ
ಹಯವದನ ॥ 14 ॥ ಉತ್ಸವಾದಾಹ್ನಿಕವಾ ॥

॥ ಶ್ರೀವಾದಿರಾಜಾಂತರ್ಗತ ಶ್ರೀಮದ್ಧ್ವೇಶಾರ್ಪಣಮಸ್ತು ॥

from www.vijayadasaru.net